ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Monday, the 2nd September 1974/Bhadrapadha, 1896 S.E.

The House met in the Assembly Chamber, Vidhana Soudha, at One of the Clock.

MADAM SPEAKER [SMT. K. S. NAGARATHNAMMA] in the Chair.

STARRED QUESTIONS

(to which oral answers were given)

Houses Constructed by C.I.T B. for Poor People

197. Sri K. SRIRAMULU (Gandhinagar).—

Will the Minister for Transport and Housing be pleased to state :—

(*a*) whether the Bangalore C.I.T B. had not constructed residential quarters in Austin Town, Okalipuram, Jabbar Block, Mills Colony, Ashokapuram, Jayamahal Extension, Rajajinagar and in many other places of Bangalore for poor people from 1953 to 1960; out of these, the number of houses constructed for Harijans and Non harijans;

(*b*) the amount spent for these construction of houses for poor people by the C.I.T.B., Bangalore from 1958 to 1960;

(*c*) out of the amount spent, the amount refunded with interest ?

Sri D. K. NAIKAR (Minister for Law and Municipal Administration) [On behalf of SRI K. H. RANGANATH (Minister for Transport and Housing)]—

(*a*) The C.I.T.B., Bangalore have constructed 55 houses from 1958 to 1960 in Jabbar Block only. No houses have been constructed in other extensions during this period. These houses were not constructed with a view to allot them to Harijans or others.

(*b*) Expenditure incurred towards Jabbar Block : Rs. 93,314.69.

(*c*) Jabbar Block : Rs. 46,220.00.

ಶ್ರೀ ಕೆ. ಶ್ರೀರಾಮುಲು.– ಸ್ವಾಮಿ ನನ್ನ (ಅ) ಪ್ರಶ್ನೆಗೆ ಜಬ್ಬಾರ್ ಬ್ಲಾಕ್‌ನ್ನು ಬಿಟ್ಟು ಮತ್ತೆ ಎಲ್ಲಿಯೂ ಟ್ರಸ್ಟ್ ಬೋರ್ಡಿನವರು ಮನೆಗಳನ್ನು ಕಟ್ಟಿಸಿಲ್ಲವೆಂದು ಉತ್ತರದಲ್ಲಿ ಹೇಳಿದ್ದೀರಿ. ಆದರೆ ಜಯಮಹಲ್ ಎಕ್ಸ್‌ಟೆನ್‌ಷನ್‌ನಲ್ಲಿ 60 ಮನೆ, ಓಕಳಿಪುರಂನಲ್ಲಿ 60 ಮನೆ, ಮಿಲ್ಕ್ ಕಾಲೋನಿಯಲ್ಲಿ 200 ಮನೆ, ಅಶೋಕಪುರಂನಲ್ಲಿ 152 ಮನೆಗಳು ಹೀಗೆ ಸುಮಾರು 1 ಸಾವಿರ ಮನೆಗಳಿಗೆ 2 ಕೋಟಿ ರೂಪಾಯಿಗಳನ್ನು 1958ನೇ ಇಸ್ವಿಯಿಂದ 1960ನೇ ಇಸ್ವಿಯವರೆಗೂ ಖರ್ಚು ಮಾಡಲಾಗಿದೆ. ಆಗ ನಾನು ಅವರಲ್ಲಿ ಒಬ್ಬ ಮೆಂಬರ್ ಆಗಿದ್ದುದರಿಂದ ಈ ವಿಷಯ ನನಗೆ ಸರಿಯಾಗಿ ತಿಳಿದಿರುವುದರಿಂದಲೇ ಈ ಪ್ರಶ್ನೆಯನ್ನು ಕೇಳಿದ್ದೇನೆ. ಆದುದರಿಂದ ಇನ್ನೊಂದು ಸಲ ಕೊಟ್ಟಿರತಕ್ಕಂಥ ಉತ್ತರ ಸರಿಯಾಗಿದೆಯೇ ಎಂದು ತಿಳಿದುಕೊಂಡು ಮತ್ತೆ ಅನ್ಸರ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ?

† ಶ್ರೀ ಡಿ. ಕೆ. ನಾಯ್ಕರ್.—ಜಬ್ಬಾರ್ ಬ್ಲಾಕ್‌ನಲ್ಲಿ ಮಾತ್ರ 1958ನೇ ಇಸ್ವಿಯಿಂದ 1960ನೇ ಇಸ್ವಿಯವರೆಗೆ ಮನೆಗಳನ್ನು ಕಟ್ಟಿಸಿರತಕ್ಕಂಥದ್ದು : ಓಕಲಿಪುರಂ, ಮಿಲ್ಕ್ ಕಾಲೋನಿ, ರಾಜಾಜಿನಗರ, ಇನ್ನು ಮುಂತಾದ ಕಡೆಗಳಲ್ಲಿ ಮನೆಗಳನ್ನು ಕಟ್ಟಿಸಿರತಕ್ಕಂಥದ್ದು 1960 ನೇ ಇಸ್ವಿಯಾದ ನಂತರ. ಆದ್ದರಿಂದ ಅದನ್ನು ಉತ್ತರದಲ್ಲಿ ಕೊಡಲಿಲ್ಲ.

ಶ್ರೀ ಕೆ. ಶ್ರೀರಾಮುಲು.—ಸ್ವಾಮಿ, ಸತ್ಯಕ್ಕೆ ದೂರವಾದ ವಿಷಯಗಳನ್ನು ಏನು ಅಧಿಕಾರಿಗಳು ಕೊಟ್ಟಿದ್ದಾರೋ ಅದನ್ನೇ ಮಂತ್ರಿಗಳು ಈ ಸಭೆಯ ಮುಂದಿಡುವುದು ಸರಿಯಲ್ಲ. ನಾನು 1958 ರಿಂದ 1960 ರವರೆಗೆ ಆಲ್ಲಿ ಸದಸ್ಯನಾಗಿ ಕೆಲಸ ಮಾಡಿರುವುದರಿಂದ ಏನೇನು ಕೆಲಸ ಮಾಡಿದ್ದೇವೆಂಬುದು ನನಗೆ ಗೊತ್ತಿದೆ. 1960 ರ ನಂತರ ಯಾವ ಬಿಲ್ಡಿಂಗೂ ಕಟ್ಟಿಲ್ಲ.

ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಹೇಳುತ್ತಿರುವಂಥ ವಿಷಯದ ಬಗ್ಗೆ ನನಗೆ ತಿಳಿದಂಥ ಉತ್ತರವನ್ನು ಕೊಟ್ಟಿದ್ದೇನೆ. ಆದರೆ ಉತ್ತರ ಸರಿಯಾಗಿಲ್ಲವೆಂದು ಹೇಳುತ್ತಿರುವುದರಿಂದ ಇದನ್ನು ಇನ್ನೊಂದು ಸಲ ವೆರಿಫೈ ಮಾಡಿಸುತ್ತೇನೆ.

ಶ್ರೀ ಕೆ. ಶ್ರೀರಾಮುಲು.—ಸ್ವಾಮಿ, ಸುಮಾರು 2 ಕೋಟಿ ರೂಪಾಯಿಗಳಷ್ಟು ಹಣವನ್ನು 1958ನೇ ಇಸ್ವಿಯಿಂದ 1960ನೇ ಇಸ್ವಿಯಲ್ಲಿ ಖರ್ಚ್ ಮಾಡುವಂಥ ಶಕ್ತಿ ಇತ್ತು. ಆದರೆ ಇಂದು ಸಿ.ಐ.ಟಿ.ಬಿ. ಯವರು ನಾಲ್ಕುವರೆ ಕೋಟಿ ರೂಪಾಯಿಗಳಷ್ಟು ಹಣವನ್ನು ಸಾಲ ಮಾಡಿ ಮತ್ತೆ ಬಿಲ್ಡಿಂಗ್ ಕಟ್ಟುವಂಥ ಅವಶ್ಯಕತೆ ಏನು ಬಂತು ?

ಶ್ರೀ ಡಿ. ಕೆ. ನಾಯ್ಕರ್.—ನಿವಾಸಕ್ಕೆ ಮನೆಗಳನ್ನು ಒದಗಿಸುವ ದೃಷ್ಟಿಯಿಂದ ಸಿ.ಐ.ಟಿ.ಬಿ. ಯವರು ಈ ರೀತಿ ಮಾಡಬೇಕಾಗುತ್ತದೆ. ಮತ್ತು 'ಹೌಸ್‌ಕೋ' ನವರು ಕೆಲವೊಂದು ಸ್ಕೀಂಗಳನ್ನು ಹಾಕಿಕೊಂಡಿದ್ದಾರೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—1960ರಲ್ಲಿ ಎರಡು ಕೋಟಿ ರೂಪಾಯಿ ಖರ್ಚು ಮಾಡಿ ಬಡವರಿಗಾಗಿ ಮನೆಗಳನ್ನು ಕಟ್ಟಿಸಿ ಬಡ್ಡಿ ಇಲ್ಲದೆ ಕೊಟ್ಟಿದ್ದರು. ಈಗ 12 ಪರ್ಸೆಂಟ್ ಬಡ್ಡಿ ಹಾಕಿದ್ದಾರೆ. ಇದಕ್ಕೆ ಕಾರಣವೇನು ಸ್ವಾಮಿ ?

ಶ್ರೀ ಡಿ. ಕೆ. ನಾಯ್ಕರ್.— ಹಣದ ಕೊರತೆ ಇರುವುದರಿಂದ ಸರ್ಕಾರ ಹಣ ತರಬೇಕಾದರೆ ಅದಕ್ಕೆ ಬಡ್ಡಿಯನ್ನು ಕೊಡಬೇಕಾಗುತ್ತದೆ.

ಶ್ರೀ ಕೆ. ಶ್ರೀರಾಮುಲು.—ಕಟ್ಟಿಸಲಾಗಿರುವ ಮನೆಗಳನ್ನು ಹರಿಜನರಿಗಾಗಿ ಕಟ್ಟಿಸಿಲ್ಲವೆಂದು ಹೇಳಿದ್ದಾರೆ. ಅಶೋಕಪುರದಲ್ಲಿ ಕಟ್ಟಿಸಿರುವ 200 ಮನೆಗಳು ಹಾಗೂ ಜಬ್ಬಾರ್ ಬ್ಲಾಕ್‌ನಲ್ಲಿ ಕಟ್ಟಿಸಿರುವ 55 ಮನೆಗಳನ್ನೂ ಹರಿಜನರಿಗೇ ಕೊಟ್ಟಿದೆ, ಅವರೇ ವಾಸ ಮಾಡುತ್ತಿದ್ದಾರೆ. ಆದರೆ ಹರಿಜನರಿಗಾಗಿ ಕಟ್ಟಿಲ್ಲವೆಂದು ಹೇಳುತ್ತಿದ್ದಾರೆ. ಇದಕ್ಕೆ ಕಾರಣವೇನು ?

ಶ್ರೀ ಡಿ. ಕೆ. ನಾಯ್ಕರ್.—ಜಬ್ಬಾರ್ ಬ್ಲಾಕಿನಲ್ಲಿ ಕಟ್ಟಿಸಿರುವಂಥ ಮನೆಗಳ ವಿಚಾರವಾಗಿ ಹೇಳಬೇಕೆಂದರೆ, ರಸ್ತೆ ಮಾಡುವಾಗ ಕೆಲವರು ಮನೆಗಳನ್ನು ಕಳೆದುಕೊಂಡರು. ಅವರಿಗೆ ಮನೆಗಳನ್ನು ಕೊಡಲಾಯಿತು. ಆದೇ ರೀತಿಯಾಗಿ ಸ್ಲಂ ಡ್ವೆಲರ್ಸ್‌ಗೆ ಮನೆಗಳನ್ನು ಕೊಡಲಾಗಿದೆ. ಅವರಲ್ಲಿ ಹರಿಜನರೂ ಮತ್ತು ಇತರರೂ ಇದ್ದಾರೆ. ಆದ್ದರಿಂದ ಇವುಗಳನ್ನು ಹರಿಜನರಿಗಾಗಿಯೇ ಅಲ್ಲ ಎಲ್ಲರಿಗೂ ಕಟ್ಟಿಸಿದ್ದು ಎಂದು ಹೇಳಿದೆ.

---

† Indicate that remarks or speeches have not been revised by the member concerned.